# ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ಸಕಲೇಶಪುರ.

**ಉಪಸ್ಥಿತರುಃ**

ಶ್ರೀ ಲಕ್ಷ್ಮೀ ನರಸಿಂಹ ಆರ್.ವಿ,

ಬಿ.ಎ.ಎಲ್., ಎಲ್.ಎಲ್.ಬಿ.,

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ಸಕಲೇಶಪುರ.**

## ಸಿ.ಸಿ.ನಂ.205/2025

| | | |
|---|---|---|
| **ಪಿರ್ಯಾದುದಾರರು** | : | ಸಕಲೇಶಪುರ ಗ್ರಾಮಾಂತರ ಪೋಲಿಸ್ ಠಾಣೆ |
| | -ವಿರುದ್ಧ - | |
| **ಆರೋಪಿತರು** | | ಶಿವಪ್ಪ ಬಿನ್ ಸುಬ್ಬಶೆಟ್ಟಿ,<br>ವಯಸ್ಸು 75 ವರ್ಷ,<br>ವಾಸ - ಚಿನ್ನಹಳ್ಳಿ ಗ್ರಾಮ,<br>ಹೊಸಕೋಟೆ ಹೋಬಳಿ,<br>ಆಲೂರು ತಾಲ್ಲೂಕು,<br>ಹಾಸನ ಜಿಲ್ಲೆ. |
| | | |

## ದೋಷಾರೋಪಣೆ

ನಾನು **ಲಕ್ಷ್ಮೀ ನರಸಿಂಹ ಆರ್.ವಿ, ಬಿ.ಎ.ಎಲ್., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ., ಸಕಲೇಶಪುರ,** ಈ ಮೂಲಕ ಆರೋಪಿಯಾದ ಇವರ ಮೇಲೆ ಮಾಡಿದ ದೋಷಾರೋಪಣೆ ಏನೆಂದರೆ.

ದಿನಾಂಕ 26.01.2025 ರಂದು ಬೆಳಿಗ್ಗೆ 11.30 ಗಂಟೆ ಸಮಯದಲ್ಲಿ ಚಾಸಾ-1 ರವರ ತಾಯಿ ಚಾಸಾ-5 ರವರ ಬಾಬ್ತು ಸಕೇಶಪುರ ತಾಲ್ಲೂಕು ಬೆಳಗೋಡು ಹೋಬಳಿ, ಹೊಸಗದ್ದೆ ಗ್ರಾಮದ ಸರ್ವೆ ನಂ. 83/1 ಜಮೀನಿನಲ್ಲಿ ತೋಟದ ಕಾಫಿ ಕೂಯ್ಯು ಕೆಲಸವನ್ನು ಮಾಡುತ್ತಿದ್ದಾಗ ಅದೇ ಸಮಯಕ್ಕೆ ಆರೋಪಿಯು ತನ್ನ ಕೈಯಲ್ಲಿ ಕಾರದ ಪುಡಿ ಹಾಗೂ ಮಚ್ಚು ಕತ್ತಿಯೊಂದಿಗೆ ಚಾಸಾ-4 ರವರ ಬಾಬ್ತು ತೋಟಕ್ಕೆ ಅತಿಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 329(3) ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಹಾಗೂ ಸದರಿ ಅಪರಾದವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ ಮತ್ತು ಸದರಿ ಆರೋಪಣೆ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಆರೋಪಿತರಾದ ನೀವು ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಮೇಲ್ಕಂಡ ಕೃತ್ಯಗಳನ್ನು ಮುಂದುವರಿಸುತ್ತಾ, ಆರೋಪಿಯಾದ ನೀವು ಚಾಸಾ-1 ರವರಿಗೆ ತಾನು ತಂದಿದ್ದ ಕಾರದ ಪುಡಿಯನ್ನು ಮೈಕೈಗೆ ಎರೆಚಿ ಕೈಗಳಿಂದ ಹಲ್ಲೇ ಮಾಡಿದ್ದು, ಆ ಮೂಲಕ ಆ ಮೂಲಕ ಭಾರತೀಯ ನ್ಯಾಯ ಸಂಹಿತೆ

ಕಲಂ 115(2) ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಹಾಗೂ ಸದರಿ ಅಪರಾದವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

ಆರೋಪಿತರಾದ ನೀವು ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಮೇಲ್ಕಂಡ ಕೃತ್ಯಗಳನ್ನು ಮುಂದುವರಿಸುತ್ತಾ, ಆರೋಪಿಯಾದ ನೀವು ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 351(2) ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಹಾಗೂ ಸದರಿ ಅಪರಾದವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ ಮತ್ತು ಸದರಿ ಆರೋಪಣೆ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

[ಈ ದೋಷಾರೋಪಣೆಯನ್ನು ಈ ದಿನ ದಿನಾಂಕ 11.07.2025 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ]

ಓ.ಹೇ.ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಕಲೇಶಪುರ.

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಸಕಲೇಶಪುರ
ಸಿ.ಸಿ.ಸಂಖ್ಯೆ **205/2025**

ಪಿರ್ಯಾದುದಾರರು : ಯಸಳೂರು ಪೊಲೀಸ್

ವಿರುದ್ಧ

ಆರೋಪಿ : ಶಿವಪ್ಪ ಬಿನ್ ಸುಬ್ಬಶೆಟ್ಟಿ,

1. ಪ್ರಶ್ನೆ : ಈಗ ನಿಮಗೆ ಕನ್ನಡದಲ್ಲಿ ಓದಿ ಹೇಳಿದ ಆಪಾದನೆಯು ಅರ್ಥವಾಯಿತೇ?
ಉತ್ತರ :

2. ಪ್ರಶ್ನೆ : ನೀವು ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?
ಉತ್ತರ :

ಮೇಲೆ ಹೇಳಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಕಲೇಶಪುರ.